ಕ್ರಮವನ್ನೂ ಕೈಕೊಳ್ಳದಿರುವುದರಿಂದ ಜನರು ಈ ಬಗ್ಗೆ ಪ್ರತಿಭಟಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದು ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮುನ್ನ ಸೀಮೆಯೆಣ್ಣೆ ಸರಬರಾಜು ಮಾಡಿ ಅದರ ಅಭಾವವನ್ನು ಪರಿಹಾರ ಮಾಡುವ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ಕೈಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಸರಾಸರಿ ೩೬,೦೦೦ ಕಿ. ಲೀ. ಗಳಷ್ಟು ಸೀಮೆ ಎಣ್ಣೆಯನ್ನು ಪ್ರತಿ ಮಾಹೆಗೆ ಬಿಡುಗಡೆ ಮಾಡುತ್ತಿದ್ದು, ಜಿಲ್ಲಾವಾರು ಬೇಡಿಕೆಯ ಮೇರೆಗೆ ಈ ಸೀಮೆ ಎಣ್ಣೆಯ ಕೋಟಾವನ್ನು ಅವಶ್ಯಕತೆ ಮೇರೆಗೆ ಪ್ರತಿ ಜಿಲ್ಲೆಗೆ ರಾಜ್ಯ ಮಟ್ಟದ ಸಂಯೋಜನಾಧಿಕಾರಿ ಐ ಒ. ಸಿ ಹಾಗೂ ಇತರೆ ಆಯಿಲ್ ಕಂಪೆನಿಗಳ ಅಧಿಕಾರಿಗಳ ಜೊತೆ ಪ್ರತಿ ತಿಂಗಳು ಚರ್ಚೆ ನಡೆಸಿ, ಬಿಡುಗಡೆ ಮಾಡುತ್ತಿರುತ್ತದೆ. ಕೊಡಗು ಜಿಲ್ಲೆಗೆ ಮಾರ್ಚಿ ೧೯೮೬ ರಿಂದ ಈವರೆಗೆ ಬಿಡುಗಡೆ ಮಾಡಿರುವ ಸೀಮೆ ಎಣ್ಣೆ ಪ್ರಮಾಣವು ಈ ಕೆಳಕಂಡಂತೆ ಇರುತ್ತದೆ.

					(ಕಿ. ಲೀಟರುಗಳಲ್ಲಿ)		
ಮಾರ್ಚಿ	೧೯೮೬	...	೫೫೦				
ಏಪ್ರಿಲ್	,,	...	೫೦೦	ಆಕ್ಟೋಬರ್	೧೯೮೬	...	೫೫೦
ಮೇ	,,	...	೫೧೦	ನವೆಂಬರ್	,,	...	೬೫೦
ಜೂನ್	,,	...	೬೫೦	ಡಿಸೆಂಬರ್	,,	...	೬೫೦
ಜುಲೈ	,,	...	೬೦೦	ಜನವರಿ	೧೯೮೭	...	೬೫೦
ಆಗಸ್ಟ್	,,	...	೫೫೦	ಫೆಬ್ರುವರಿ	,,	...	೬೫೦
ಸೆಪ್ಟೆಂಬರ್	,,	...	೫೫೦	ಮಾರ್ಚಿ	,,	...	೫೭೫

(ಒಂದು ಕಿಲೋ ಲೀಟರ್ ... ೧೦೦೦ ಲೀಟರ್‌ಗಳು)

ಇದರಿಂದ ಕೊಡಗು ಜಿಲ್ಲೆಗೆ ಸಂಪೂರ್ಣ ವರ್ಷಗಳಿಂದ ಸೀಮೆಎಣ್ಣೆಯನ್ನು ಸಾಕಷ್ಟು ಬಿಡಂಗಡೆ ಮಾಡುತ್ತಿದ್ದು, ಕೊಡಗು ಜಿಲ್ಲೆಯಲ್ಲಾಗಲೀ ಅಥವಾ ಇನ್ಯಾವುದೇ ಜಿಲ್ಲೆಯಲ್ಲಾಗಲಿ ಸೀಮೆಎಣ್ಣೆ ಅಭಾವ ಇರುವ ಬಗ್ಗೆ ಜಿಲ್ಲಾಧಿಕಾರಿಗಳಿಂದಾಗಲಿ ಯಾವ ರೀತಿಯ ದೂರುಗಳೂ ಬಂದಿರುವುದಿಲ್ಲ.

ಪ್ರತಿ ತಿಂಗಳು ಎಲ್ಲಾ ಜಿಲ್ಲಾಧಿಕಾರಿಗಳ ಸಹಾಯಕರ ಸಭೆಯನ್ನು ನಡೆಸಿ, ಆ ಸಭೆಯಲ್ಲಿ ಆಯಾಯಾ ಜಿಲ್ಲೆಗೆ ಬಿಡುಗಡೆ ಮಾಡಿರುವ ಸೀಮೆ ಎಣ್ಣೆ ಕೋಟಾವನ್ನು ಪೂರ್ಣ ಎತ್ತುವಳಿ ಮಾಡಿ, ಹಂಚಿಕೆಯಲ್ಲಿ ಯಾವ ರೀತಿಯ ಲೋಪದೋಷಗಳು ಇಲ್ಲದಂತೆ ಮಾಡಲು ತಾಕೀತು ಮಾಡಲಾಗಿದೆ.

ಈ ವಿಷಯದಲ್ಲಿ ಕೊಡಗು ಜಿಲ್ಲಾಧಿಕಾರಿಗಳು ಮತ್ತು ಪುಡ್ ಅಸಿಸ್ಟೆಂಟ್‌ರವರಿಗೆ ಸೂಕ್ತ ನಿರ್ದೇಶನವನ್ನು ನೀಡಲಾಗಿದೆ ಹಾಗೂ ಆ ಜಿಲ್ಲೆಯಲ್ಲಿ ಸೀಮೆ ಎಣ್ಣೆಯ ಅಭಾವಕ್ಕೆ ಯಾವ ರೀತಿಯ ಆಸ್ಪದವನ್ನೂ ಕೊಡದೆ ಇರಲು ಸಂಬಂಧಿಸಿದ ಆಯಿಲ್ ಕಂಪೆನಿಗಳವರಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಲಾಗಿದೆ.

೧೧) ಕ. ರಾ. ರ. ಸಾರಿಗೆ ಸಂಸ್ಥೆಯವರು ಹಳ್ಳಿಗಳಲ್ಲಿ ಬಸ್‌ತಾಣಗಳನ್ನು ಒದಗಿಸುವುದು.

ಶ್ರೀ ಬಿ.ಎ. ಉಪ್ಪಿನ.—ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಹಳ್ಳಿಹಳ್ಳಿಗಳಿಗೆ ಸಾರಿಗೆ ಸೌಲಭ್ಯವನ್ನು ಹೆಚ್ಚಿನ ರೀತಿಯಲ್ಲಿ ಒದಗಿಸುತ್ತಿದ್ದಾರೆ. ಧನ್ಯವಾದಗಳು. ಆದರೆ ಹಳ್ಳಿಗಳಲ್ಲಿ ಒಂದೂ ಬಸ್ ಶೆಲ್ಟರ್‌ಗಳು ಇಲ್ಲದೆ ಇರುವುದು ತುಂಬಾ ಶೋಚನೀಯ ಪ್ರಯಾಣಿಕರು ಮಳೆ ಬಿಸಿಲು ಎನ್ನದೆ ಬಸ್‌ಗಾಗಿ ದಾರಿಯಲ್ಲಿ ಕಾಯುತ್ತಿರಬೇಕಾಗುತ್ತದೆ. ಇಲ್ಲದಿದ್ದರೆ ಮಗಲಲ್ಲಿ ಇರತಕ್ಕ ಮನೆಯರು ಆಶ್ರಯ ಪಡಬೇಕಾಗುತ್ತದೆ, ಇದು ಪ್ರಯಾಣಿಕರಿಗೆ ಬಹಳ ತೊಂದರೆದಾಯಕವಾದ ಕೆಲಸ ಒಂದು ಬಸ್ ಶೆಲ್ಟರ್ ಕಟ್ಟಲಿಕ್ಕೆ ಕೇವಲ ೨೫ ಅಥವಾ ೩೦ ಸಾವಿರ ಬೇಕಾಗುತ್ತದೆ ಆದ್ದರಿಂದ ಸರ್ಕಾರದ ಬಸ್ ಸೌಕರ್ಯವಿರುವ ಪ್ರತಿಯೊಂದು ಹಳ್ಳಿಗೆ ಬಸ್ ಶೆಲ್ಟರ್ ಕಟ್ಟಿಸುವ ವ್ಯವಸ್ಥೆಯನ್ನು ಮಾಡಬೇಕು. ಅಲ್ಲದೆ ಇತ್ತೀಚೆಗೆ ಬಸ್ ಪ್ರಯಾಣದ ಕಾಲಕ್ಕೆ ೧೦ ಪೈಸೆ ೨೦ ಪೈಸೆ ಚಿಲ್ಲರೆಯನ್ನೂ ಕಾರ್ಯನಿರ್ವಾಹಕರು ಕೊಡುವುದೇ ಇಲ್ಲ. ಬಡಜನರಿಗೆ ಇದೇ ಬಹಳ

ತೊಂದರೆದಾಯಕವಾಗಿದೆ. ಈ ತೊಂದರೆಯನ್ನು ಹೋಗಲಾಡಿಸಲು ಗುಜರಾತ್ ಸರ್ಕಾರದವರು ೧೦ ಪೈಸೆ ಮತ್ತು ೨೦ ಪೈಸೆ ಕೂಪನ್‌ಗಳನ್ನು ಪ್ರಿಂಟ್ ಮಾಡಿಸಿಕೊಡುತ್ತಾರೆ. ಆ ಕೂಪನ್‌ಗಳನ್ನು ಅವರು ತಮ್ಮ ಮುಂದಿನ ಪ್ರಯಾಣಕ್ಕೆ ಉಪಯೋಗ ಮಾಡಬಹುದು. ಅಲ್ಲದೆ ಸರ್ಕಾರದ ಕೂಪನ್‌ಗಳು ರಾಜ್ಯದಾದ್ಯಂತ ಚಲಾವಣೆಯಲ್ಲಿ ಇರುತ್ತವೆ. ಕರ್ನಾಟಕ ಸರ್ಕಾರದವರು ಗುಜರಾತ್ ಸರ್ಕಾರದಂತೆ ೧೦ ಮತ್ತು ೨೦ ಪೈಸೆಗಳ ಕೂಪನ್‌ಗಳನ್ನು ಪ್ರಿಂಟ್ ಮಾಡಿಸಿ, ಈ ತೊಂದರೆಯನ್ನು ದೂರ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ

ಶ್ರೀ ವೀರಣ್ಣ.--ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಯಾಣಿಕರ ಅನುಕೂಲಕ್ಕೋಸ್ಕರ ಸಾರಿಗೆ ಕಾರ್ಯಾಚರಣೆ ನಡೆಸುವುದರ ಜೊತೆಗೆ ಪ್ರಯಾಣಿಕರ ಸೌಲಭ್ಯಗಳನ್ನು ಕೂಡ ಒದಗಿಸಿಕೊಡುವುದರ ಕಡೆಗೆ ಗಮನ ಹರಿಸುತ್ತಿದೆ. ಪ್ರಯಾಣಿಕರ ಸೌಲಭ್ಯಗಳಾದ ಬಸ್ ನಿಲ್ದಾಣ, ಉಪಹಾರ ಗೃಹ ವಿವಿಧ ವಾದರಿಯ ಮಳಿಗೆಗಳು, ಶೌಚಗೃಹ, ವಿಶ್ರಾಂತಿ ಕೊಠಡಿ ಹಾಗೂ ಇತರೆ ಪ್ರಯಾಣಿಕರ ಸೌಲಭ್ಯಗಳನ್ನು ಒದಗಿಸುತ್ತಿದೆ. ಜನಸಂದಣಿಯನ್ನು ಹೊಂದಿರುವ ಪ್ರಮುಖ ಸಂಚಾರ ಸ್ಥಳಗಳಲ್ಲಿ ಇಂಥ ಬಸ್ ನಿಲ್ದಾಣಗಳನ್ನು ನಿರ್ಮಿಸಲಾಗುತ್ತಿದೆ.

ಯಾವ ಸ್ಥಳದಲ್ಲಿ ಸಂಚಾರದ ಒತ್ತಡ ಕಡಿಮೆ ಇರುತ್ತದೋ ಹಾಗೂ ಜನರು ಒಟ್ಟಾರೆ ಬಸ್ಸಿಗಾಗಿ ಅಷ್ಟಾಗಿ ಕಾಯುತ್ತಿರುವುದಿಲ್ಲವೋ ಅಂತಹ ಸ್ಥಳಗಳಲ್ಲಿ ತಂಗುದಾಣಗಳನ್ನು ಒದಗಿಸಲಾಗುತ್ತಿದೆ. ನಗರಗಳಲ್ಲಿ ಪ್ರಯಾಣಿಕರು ಬಿಸಿಲು ಮತ್ತು ಮಳೆಯಿಂದ ರಕ್ಷಿಸಿಕೊಳ್ಳಲು ಸಿಟಿ ಪಿಕ್‌ಅಪ್ ಶೆಲ್ಟರ್‌ಗಳನ್ನು ಒದಗಿಸಲಾಗುತ್ತಿದೆ. ಮಾರ್ಚ್ ೧೯೮೬ರಂತೆ ಸಂಸ್ಥೆಯು ೨೧೧ ಬಸ್ ನಿಲ್ದಾಣಗಳನ್ನು (೨೫ ನಿಲ್ದಾಣಗಳು ನಿರ್ಮಾಣ ಹಂತದಲ್ಲಿದೆ), ೩೭೬ ಗ್ರಾಮೀಣ ಮಾರ್ಗಾಶ್ರಯಗಳನ್ನು ಮತ್ತು ೪೭೦ ಸಿಟಿ ಪಿಕ್‌ಅಪ್ ಶೆಲ್ಟರ್‌ಗಳನ್ನು ನಿರ್ಮಿಸಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣ ಮತ್ತು ಮಾರ್ಗಾಶ್ರಯಗಳನ್ನು ದೊರೆಯುವ ಸಂಪನ್ಮೂಲಗಳ ಆಧಾರದ ಮೇಲೆ ನಿರ್ಮಿಸುತ್ತಿದೆ. ಆದ್ದರಿಂದ ಮಾರ್ಗಾಶ್ರಯಗಳನ್ನು ನಿರ್ಮಿಸುವ ಅವಶ್ಯಕತೆಯು ಎನ್. ಆರ್. ಇಪಿ. ಐ.ಆರ್.ಡಿ.ಪಿ. ಇತರೆ ಕಾರ್ಯಕ್ರಮಗಳ ಮೂಲಕ ದೊರೆಯುವ ಹಣದಿಂದ ನಿರ್ಮಿಸಲಾಗುತ್ತಿದೆ. ಹಲವಾರು ಮಾರ್ಗಾಶ್ರಯಗಳನ್ನು ಈ ಯೋಜನೆಯ ಅಡಿಯಲ್ಲಿ ಅಳವಡಿಸಲಾಗಿದೆ. ಈ ಬಗ್ಗೆ ಸಂಸ್ಥೆಯು ಎಲ್ಲಾ ಜಿಲ್ಲಾಪರಿಷತ್‌ಗಳೊಡನೆ ಸಮಾಲೋಚಿಸಿ ಮುಂದಿನ ನಿರ್ಣಯನ್ನು ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವುದು,

ಗುಜರಾತ್‌ನಲ್ಲಿ ನಿರ್ವಾಹಕರು ೧೦-೨೦ ಪೈಸೆ ಚಿಲ್ಲರೆಗೆ ಬದಲಾಗಿ ಕೂಪನ್‌ಗಳನ್ನು ಕೊಡುವ ಬಗ್ಗೆ ಮಾಹಿತಿ ಇಲ್ಲ. ಆದಾಗ್ಯೂ, ಸರಿಯಾದ ಪ್ರಯಾಣ ದರವನ್ನು ಪ್ರಯಾಣಿಕರು ಸಲ್ಲಿಸಲು ತೊಂದರೆಯಾದ್ದರಿಂದ ಬಾಂಬೆ ನಗರದ ಜಿ.ಇ.ಎನ್.ಟಿ.ಯು, ಚಿಲ್ಲರೆ ಅಭಾವನ್ನು ಗಮನಿಸಿ ಕೂಪನ್ ಪದ್ಧತಿಯನ್ನು ಪ್ರಾರಂಭಿಸಿತು, ಇದರಿಂದ ಪ್ರಯಾಣಿಕರಿಗೆ ಚಿಲ್ಲರೆ ಬದಲಾಗಿ ಕೂಪನನ್ನು ಕೊಡಲಾಗುತ್ತಿತ್ತು. ಮತ್ತು ಈ ಕೂಪನನ್ನು ಮುಂದಿನ ಪ್ರಯಾಣದಲ್ಲಿ ಖರೀದಿಸುವ ಟಿಕೆಟ್‌ಗಳ ಸಮಯದಲ್ಲಿ ಉಪಯೋಗಿಸಿಕೊಳ್ಳಬಹುದಾಗಿತ್ತು. ಈ ಕೂಪನ್‌ಗಳು ಸಂಪೂರ್ಣ ಬಾಂಬೆ ನಗರದಲ್ಲಿ ಚಲಾವಣೆಯಲ್ಲಿರುವ ಮತ್ತೊಂದು ನಾಣ್ಯದಂತಾಗಿತ್ತು ಹಾಗೂ ಎಲ್ಲಾ ಚಿಕ್ಕಪುಟ್ಟ ಅಂಗಡಿಯವರು ಇದನ್ನು ಸಮಂಜಸ ರೂಪದಲ್ಲಿ ಹೊಂದಿರುತ್ತಿದ್ದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಇದೇ ಪದ್ಧತಿಯನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಪರಿಶೀಲಿಸುತ್ತಿತ್ತು. ಆದರೆ ದೇಶದಲ್ಲಿ ಚಿಲ್ಲರೆ ನಾಣ್ಯಗಳ ಅಮದಿನಿಂದ ಅಭಾವವು ಸಾಕಷ್ಟು ಉತ್ಪವಾಗಿರುವುದು. ಇದಲ್ಲದೆ ಭಾರತೀಯ ರಿಸರ್ವ್‌ಬ್ಯಾಂಕ್‌ನವರು ಜಿ.ಇ.ಎನ್.ಟಿ. ಯವರಿಗೆ ಕೂಪನ್ ಸಿಸ್ಟಮ್‌ಗೆ ನೀಡಿದ್ದ ಅನುಮತಿಯನ್ನು ಹಿಂತೆಗೆದುಕೊಂಡಿದ್ದಾರೆ. ಸಂಸ್ಥೆಗೆ, ಚಿಲ್ಲರೆ ದೊರೆಯುವ ಬಗ್ಗೆ ಇತ್ತೀಚೆಗೆ ಯಾವುದೇ ದೂರುಗಳು ಬಂದಿರುವುದಿಲ್ಲ. ಆದಕಾರಣ ಕೂಪನ್‌ಗಳನ್ನು ಮುದ್ರಿಸಿ ಹೊಸ ಪದ್ಧತಿಯನ್ನು ಜಾರಿಗೊಳಿಸುವ ಅವಶ್ಯಕತೆ ಇರುವುದಿಲ್ಲ.

ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ್ಪಿನ್ ಅವರ ಕ್ಷೇತ್ರದಲ್ಲಿ ಎಲ್ಲಿಯಾದರೂ ಬಸ್ ಶೆಲ್ಟರನ ಅವಶ್ಯಕತೆ ಇದ್ದರೆ ಮತ್ತು ಎಲ್ಲಿಯಾದರೂ ಜನಸಂಖ್ಯೆ ಜಾಸ್ತಿಯಿದ್ದು, ಅಲ್ಲಿ ಬಸ್‌ಶೆಲ್ಟರ್‌ನ ಅನುಕೂಲವಿಲ್ಲದಿದ್ದರೆ, ಆ ಬಗ್ಗೆ ಅವರು ನಮಗೆ ಮಾಹಿತಿಗಳನ್ನು ಕೊಟ್ಟರೆ ನಾವು ಅಲ್ಲಿ ಬಸ್ ಶೆಲ್ಟರ್‌ಗಳನ್ನು ಕಟ್ಟಿಸಿಕೊಡಲು ಕ್ರಮ ಕೈಕೊಳ್ಳುತ್ತೇವೆ.